**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**
**<u>ಘನ ನ್ಯಾಯಾಲಯದಲ್ಲಿ</u>**

**<u>ಪ್ರಕರಣ ಸಂಖ್ಯೆಃ ಎಸ್.ಸಿ 26/2020</u>**

ದಿನಾಂಕಃ 14.12.2021
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾಃ 12 (ಚಾ.ಸಾ.15)

| | | |
|---|---|---|
| ಹೆಸರು | ಃ | ಡಾ.ಶ್ರೀವಿಧ್ಯಾ ವೈ |
| ಗಂಡನ ಹೆಸರು | ಃ | ಶ್ರೀಧರ್ ಕೆ.ಜೆ. |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಹಿರಿಯ ವೈಜ್ಞಾನಿಕ ಅಧಿಕಾರಿ |
| ವಾಸ ಸ್ಥಳ | ಃ | ಬೆಂಗಳೂರು |

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ (ವಿ.ಸಿ.ಮೂಲಕ)</u>

ನಾನು ಜೂನ್ 2018 ರಿಂದ ಬೆಂಗಳೂರಿನ ವಿದಿ ವಿಜ್ಞಾನ ಪ್ರಯೋಗಾಲಯದಲ್ಲಿ ಕೆಲಸ ಮಾಡುತ್ತಿದ್ದೇನೆ.

2. ನಾನು ಬಯೋ ಟೆಕ್ನಾಲಾಜಿಯಲ್ಲಿ ಪಿ.ಹೆಚ್.ಡಿ. ಮಾಡಿದ್ದು, ಬಯಾಲಾಜಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಬೆಂಗಳೂರಿನಲ್ಲಿ 45 ದಿನಗಳ ತರಬೇತಿಯನ್ನು ಹಾಗೂ ಹೈದ್ರಾಬಾದಿನಲ್ಲಿ ಒಂದು ವಾರ ತರಬೇತಿ ಪಡೆದಿದ್ದೇನೆ. ನಾನು ವರ್ಷಕ್ಕೆ 250 ಪ್ರಕರಣಗಳಂತೆ 2015 ರಿಂದ ಪ್ರಕರಣಗಳ ವಿಶ್ಲೇಷಣೆ ಮಾಡುತ್ತಾ ಬಂದಿದ್ದೇನೆ.

3. ತಾಃ 24.02.2020 ರಂದು ಪಿಸಿ 640 – ಪ್ರವೀಣ್ ಕೆ ಇವರು ನಮ್ಮ ಕಚೇರಿಗೆ ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆಯ ಕ್ರೈಂ 6/20 ಕ್ಕೆ ಸಂಬಂಧಪಟ್ಟ ಮೂರು ಸೀಲಾದ ವಸ್ತುಗಳನ್ನು ನಮ್ಮ ಕಚೇರಿಗೆ ತಂದು ಕೊಟ್ಟಿದ್ದರು. ಅದೇ ದಿನ ಸದರಿ ವಸ್ತುಗಳ ಪರೀಕ್ಷೆಯ ಜವಾಬ್ದಾರಿಯನ್ನು ನಮ್ಮ ಸಹಾಯಕ ನಿರೀಕ್ಷಕರು ನನಗೆ ವಹಿಸಿಕೊಟ್ಟರು.

**4.** ತಾಃ **04.05.2020** ರಂದು ಸದರಿ ವಸ್ತುಗಳನ್ನು ನೋಡಲಾಗಿ ಅವುಗಳು ಸೀಲಾಗಿದ್ದು, ಅವುಗಳ ಸೀಲು ಮಾದರಿ ಸೀಲಿಗೆ ಹೊಂದುತ್ತಿತ್ತು. ಸದರಿ ವಸ್ತುಗಳನ್ನು ತೆರೆದು ನೋಡಲಾಗಿ ಅವುಗಳ ಪೈಕಿ ವಸ್ತು ಸಂಖ್ಯೆ -

1. ರಕ್ತವಾದ ಮಣ್ಣು,
2. ಕಂಟ್ರೋಲ್ ಮಣ್ಣು ,
3. ಒಂದು ಡ್ರಾಗರ್ ಆಗಿತ್ತು.

**5.** ಮೇಲ್ಕಂಡ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ **1** ಮತ್ತು **3** ರಲ್ಲಿ ರಕ್ತದ ಅಂಶ ಕಂಡು ಬಂದಿತು ಹಾಗೂ ಅದು ಮಾನವನ ರಕ್ತವಾಗಿತ್ತು. ವಸ್ತು ಸಂಖ್ಯೆ **2** ರಲ್ಲಿ ರಕ್ತದ ಅಂಶ ಕಂಡು ಬಂದಿರಲಿಲ್ಲ. ರಕ್ತದ ಅಂಶ ತುಂಬಾ ಕಡಿಮೆ ಇದ್ದುದರಿಂದ ರಕ್ತದ ಗುಂಪನ್ನು ಕಂಡು ಹಿಡಿಯಲು ಆಗಿರುವುದಿಲ್ಲ.

**6.** ಪರೀಕ್ಷೆಯ ನಂತರ ಸದರಿ ವಸ್ತುಗಳನ್ನು ಸೀಲು ಮಾಡಿ ವರದಿಯನ್ನು ತಯಾರಿಸಿ, ಮೇಲಾಧಿಕಾರಿಯ ಮೂಲಕ ವರದಿಯನ್ನು ಮಾದರಿ ಸೀಲಿನೊಂದಿಗೆ ಸಂಬಂಧಪಟ್ಟ ಪೊಲೀಸರಿಗೆ ಕಳುಹಿಸಿಕೊಟ್ಟಿರುತ್ತೇನೆ. ವರದಿಯಾದ ನಿಪಿ.**6** ನ್ನು ಹಾಗು ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿನಯನ್ನು ಈಗ ನಿಪಿ.**6**(ಬಿ) ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ವಸ್ತುಗಳನ್ನು ಈಗಾಗಲೇ ಎಂ.ಓ.**1** ರಿಂದ **3** ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ</u>

**7.** ಪೊಲೀಸರು ತಮ್ಮ ಕೋರಿಕೆ ಪತ್ರದಲ್ಲಿ ರಕ್ತದ ಗುಂಪನ್ನು ಕಂಡು ಹಿಡಿಯುವಂತೆ ನನ್ನನ್ನು ಕೋರಿರಲಿಲ್ಲ. ಆ ಕಾರಣಕ್ಕಾಗಿ ನಾನು ರಕ್ತದ ಗುಂಪನ್ನು ಕಂಡು ಹಿಡಿದಿರುವುದಿಲ್ಲ ಅಂದರೆ ಸರಿಯಲ್ಲ.

**8.** ನನ್ನ ವರದಿಯಲ್ಲಿ ವಸ್ತು ಸಂಖ್ಯೆ **3** ರಲ್ಲಿ ರಕ್ತದ ಕಲೆಯ ಪ್ರಮಾಣ ಕಂಡು ಬರುತ್ತಿಲ್ಲ ಎಂದು ಇದೆ ಅಂದರೆ ಸಾಕ್ಷಿ ಕಣ್ಣಿಗೆ ಕಾಣುತ್ತಿಲ್ಲ ಎಂದು ಅದರ

ಅರ್ಥವಾಗಿದ್ದು, ಪರೀಕ್ಷೆ ಮಾಡಿದಾಗ ರಕ್ತದ ಅಂಶ ಇರುವುದು ಕಂಡು ಬಂದಿತು ಎಂದು ನುಡಿದಿದ್ದಾರೆ.

**9.** ರಕ್ತವಾದ ಮಣ್ಣು ಹಾಗೂ ರಕ್ತವಾದ ಟಾರಿನ ನಡುವೆ ವ್ಯತ್ಯಾಸ ಇದೆ ಅಂದರೆ ಸರಿ. ನಾನು ಯಾವುದೇ ಪರೀಕ್ಷೆ ಮಾಡದೇ ಪೊಲೀಸರ ಕೋರಿಕೆಯ ಮೇರೆಗೆ ಅವರು ಕೇಳಿದಂತೆ ಸುಳ್ಳು ವರದಿ ತಯಾರಿಸಿ ಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**